ಒಂದನೇ ಅಪರ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ,

ಕೊಳ್ಳೇಗಾಲ

ಸಿ ಸಿ ಸಂಖ್ಯೆ 832/2018

ಚಾಸಾ-2   ಫ್ರಾಸಾ-2

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ಬಸವಣ್ಣ |
| ತಂದೆಯ ಹೆಸರು | : | ನಂಜುಂಡಪ್ಪ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಚಿಂಚಹಳ್ಳಿ ಗ್ರಾಮ |

ದಿನಾಂಕ 29.06.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ -  ಮಾನ್ಯ ಸಸಅ ರವರಿಂದ

ಚಾಸಾ-1 , ಚಾಸಾ-3 ರಿಂದ ಚಾಸಾ -7 ರವರ ಪರಿಚಯ ನನಗೆ ಇರುತ್ತದೆ. ಆರೋಪಿ ಪರಿಚಯ ನನಗೆ ಇರುತ್ತದೆ. ನಾನು ಏನನ್ನು ನೋಡಿರುವುದಿಲ್ಲ. ನಾನು ಯಾವುದೇ ಗಲಾಟೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಪ್ರಕರಣ ಸಂಬಂಧ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಗಿದೆ)**

**ಪಾಟೀ ಸವಾಲು : ಮಾನ್ಯ ಸ.ಸ.ಅ ರವರಿಂದ**

ದಿಃ05.07.2018 ರಂದು ಬೆಳಗ್ಗೆ 6-00 ಸಮಯದಲ್ಲಿ ಚಾಸಾ-1 ರವರು ಹೊಸ ಬಡಾವಣೆಯಲ್ಲಿ ನಿರ್ಮಿತವಾದ ಮನೆಗಳಿಗೆ ಚರಂಡಿ ಸಂಪರ್ಕ ಕಲ್ಪಿಸುವುದಕ್ಕಾಗಿ ನಿರ್ಮಾಣದ ಮಾಡಿದ್ದ ಸಿಮೆಂಟ್ ಬೆಡ್ಡುಗಳನ್ನು ತೆಗೆದುಕೊಂಡು ಬರುವಂತೆ ಕೆಲಸಗಾರರನ್ನು ಕಳುಹಿಸಿದ್ದು, ಅದೇ ವೇಳೆ ಆರೋಪಿಯು ಆ ಕೆಲಸಗಾರರಿಗೆ ಸಿಮೆಂಟ್ ಬೆಡ್ಡನ್ನು ತೆಗೆದುಕೊಳ್ಳಲು ಬಿಡದೆ ಅದು ನನಗೆ ಸೇರಬೇಕು ಎಂದು, ಮುಟ್ಟಿದರೆ ಸುಮ್ಮನೆ ಬಿಡುವುದಿಲ್ಲ ಎಂದು ವಾಪಸ್ಸು ಕಳಹಿಸಿದನೆಂದು ಎಂದರೆ ಸರಿಯಲ್ಲ. ನಂತರ

ಚಾಸಾ–1 ರವರು ಅದನ್ನು ತೆಗೆದುಕೊಳ್ಳಲು ಬಂದಾಗ ಆರೋಪಿಯು ಚಾಸಾ–1 ರವರನ್ನು ಬೋಳಿ ಮಗನೆ, ಸೂಳೇ ಮಗನೆ ಎಂದು ಅವ್ಯಾಚ ಶಬ್ದಗಳಿಂದ ಬೈದು ನಂತರ ಚಾಸಾ–1 ರವರ ಕೊರಳ ಪಟ್ಟಿಯನ್ನು ಹಿಡಿದುಕೊಂಡು ಜೋರಾಗಿ ಎಳೆದು ಚಾಸಾ–1 ರವರ ಬಟ್ಟೆಯನ್ನು ಹರಿದುಹಾಕಿದನು ಎಂದರೆ ಸರಿಯಲ್ಲ. ನಂತರ ಅಲ್ಲೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ–1ರವರ ತಲೆಯ ಹಿಂಭಾಗಕ್ಕೆ ಹೊಡೆದು ರಕ್ತ ಗಾಯ ಪಡಿಸಿದನ್ನು ಎಂದರೆ ಸರಿಯಲ್ಲ. ನಂತರ ಚಪ್ಪಲಿಯನ್ನು ತೆಗೆದುಕೊಂಡು ಚಾಸಾ–1ರವರ ಬೆನ್ನು, ತೋಳು ಹಾಗೂ ಹಣೆಗೆ ಹೊಡೆದು ನೋವುಂಟು ಮಾಡಿದನು ಎಂದರೆ ಸರಿಯಲ್ಲ. ನಂತರ ಅಲ್ಲೇ ಇದ್ದ ನಾನು ಮತ್ತು ಚಾಸಾ–3 ರವರು ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿಯು ಚಾಸಾ–1 ರವರನ್ನು ಕುರಿತು ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ.

ದಿಃ23.07.2018 ರಂದು ಪೊಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ರ ಸಾಕ್ಷಿದಾರರ ಹೇಳಿಕೆಯಲ್ಲಿ "ದಿಃ05.07.2018 ------------------------------------------------------ ------------------------------------------------------ಮತ್ತೆ ನೋಡಿದರೆ ಗುರುತಿಸುತ್ತೇನೆ." ಸಾಕ್ಷಿಯು ಅಲ್ಲಗಳೆದಿರುವ ಹೇಳಿಕೆಯ ಭಾಗವನ್ನು ನಿಪಿ–2 ಎಂದು ಗುರುತಿಸಲಾಯಿತು. ನಿಪಿ–2ರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರು ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಎಂ. ರಂಜಿತ್ ಕುಮಾರ್)
ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಕೊಳ್ಳೇಗಾಲ.